**ಪ್ರಶ್ನೆ ಸಂಖ್ಯೆ: 63(527)**

**ಶ್ರೀ ಪ್ರಮೋದ್ ಮಧ್ವರಾಜ್:–**

**(ಮಾನ್ಯ ಸದಸ್ಯರು ಗೈರುಹಾಜರಿದ್ದರು)**

**ನಿರಂತರ ಜ್ಯೋತಿ ಯೋಜನೆ ಮಂಜೂರಾತಿ**

**64(442); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)**

ಅ) ಬಂಗಾರಪೇಟೆ ತಾಲ್ಲೂಕಿಗೆ ನಿರಂತರ ಜ್ಯೋತಿ ಯೋಜನೆ ಮಂಜೂರು ಮಾಡಲಾಗಿದೆಯೇ;

ಆ) ಮಂಜೂರು ಮಾಡಿದ್ದಲ್ಲಿ ಇದರ ಅಂದಾಜು ಮೊತ್ತ ಎಷ್ಟು;

ಇ) ಯಾವ ಯಾವ ಫೀಡರ್‌ನಲ್ಲಿ ಅಭಿವೃದ್ಧಿ ಉನ್ನತೀಕರಣ ಮತ್ತು ವಿತರಣೆ ಕಾರ್ಯಗಳು ನಡೆಯುತ್ತಿದೆ; ಫಿಡರ್‌ವಾರು ಎಷ್ಟು ಕಿ.ಮೀಗಳ ಉನ್ನತೀಕರಣ ಅಭಿವೃದ್ಧಿ ವಿಸ್ತರಣೆ ಮಾಡಲಾಗಿದೆ (ಸಂಪೂರ್ಣ ವಿವರಗಳನ್ನು ನೀಡುವುದು)?

**ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)**

ಅ) ಹೌದು.

ಆ) ಈ ಯೋಜನೆಗೆ ಮಂಜೂರಾಗಿರುವ ಅಂದಾಜು ಮೊತ್ತ ` 1963.52 ಲಕ್ಷಗಳು.

ಇ) ಫೀಡರ್‌ವಾರುಪ್ರಗತಿಯ ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ. | 11 ಕೆ.ವಿ. ಫೀಡರ್‌ಗಳ ಹೆಸರು | 11 ಕೆ.ವಿ ಮಾರ್ಗಗಳ ಉನ್ನತೀಕರಣ ಅಭಿವೃದ್ಧಿ ವಿಸ್ತರಣೆಯಗುರಿ (ಕಿ.ಮೀ ಗಳಲ್ಲಿ) | 11 ಕೆ.ವಿ ಮಾರ್ಗಗಳ ಉನ್ನತೀಕರಣ ಅಭಿವೃದ್ಧಿ ವಿಸ್ತರಣೆ ಮಾಡಿದ ಪ್ರಗತಿ (ಕಿ.ಮೀ ಗಳಲ್ಲಿ) | ಷರಾ |
|---|---|---|---|---|
| 1 | ಸಿದ್ದನಹಳ್ಳಿ | 35.3 | 33.3 | ಶೇ 90% ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |

| | | | | |
|---|---|---|---|---|
| 2 | ಗಾಜೇಗ | 35 | 33.3 | ಶೇ 90% ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |
| 3 | ಅಡಂಪಲ್ಲಿ | 8.3 | 5.3 | ಶೇ 80%ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |
| 4 | ಬೆನ್ನಾವರ | 56.6 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 5 | ಚಿಗಳೂರು | 32 | 0 | ಶೇ 50% ರಷ್ಟು ಕಂಬಗಳನ್ನು ಅಳವಡಿಸಲಾಗಿದೆ. |
| 6 | ಕಳ್ಳಿಕುಪ್ಪ | 36 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 7 | ಸುಂದರಪಾಳ್ಯ | 80 | 0 | ಶೇ 50% ರಷ್ಟು ಕಂಬಗಳನ್ನು ಅಳವಡಿಸಲಾಗಿದೆ. |
| 8 | ತಲ್ಲೂರು | 48.3 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 9 | ದಿನ್ನೂರು | 41 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 10 | ಜಾನುಘಟ್ಟ | 40.6 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 11 | ಕೆ.ಐ.ಎ.ಡಿ.ಬಿ. | 17 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 12 | ಹುನ್ಕುಂದ | 31.33 | 0 | ಶೇ 70% ರಷ್ಟು ಕಂಬಗಳನ್ನು ಅಳವಡಿಸಲಾಗಿದೆ. |
| 13 | ದೊಡ್ಡಚಿನ್ನಹಳ್ಳಿ | 17 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 14 | ವಿರುಪಾಕ್ಷಪುರ | 26.3 | 0 | ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |
| 15 | ಘಟ್ಟಮಾದಮಂಗಲ | 28.6 | 0 | ಶೇ 80% ರಷ್ಟು ಕಂಬಗಳನ್ನು ಅಳವಡಿಸಲಾಗಿದೆ. |
| 16 | ಕಮ್ಮಸಂದ್ರ | 12.3 | 0 | ಶೇ 80% ರಷ್ಟು ಕಂಬಗಳನ್ನು ಅಳವಡಿಸಲಾಗಿದೆ. |

**ಶ್ರೀ ನಾರಾಯಣಸ್ವಾಮಿ ಎಸ್.ಎನ್:–** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಾಮಗಾರಿಗಳು ಪ್ರಾರಂಭವಾಗಿ

ಒಂದೂವರೆ ವರ್ಷವಾಗಿದ್ದರೂ ಕೂಡ ಇನ್ನು ಕೆಲವು ಕಾಮಗಾರಿಗಳನ್ನು 50%, 70% ಎಂದು ಹೇಳುತ್ತಿದ್ದಾರೆ. ಕಾಮಗಾರಿಗಳನ್ನು ಯಾವಾಗ ಪೂರೈಸುತ್ತಾರೆಂದು ಸನ್ಮಾನ್ಯ ಸಚಿವರು ಹೇಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):–** ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಸುಮಾರು 1963.52 ಕೋಟಿ ರೂಪಾಯಿಗಳ ಯೋಜನೆ ಅಡಿಯಲ್ಲಿ ಈ ನಿರಂತರ ಜ್ಯೋತಿಯನ್ನು ತೆಗೆದುಕೊಂಡಿದ್ದೇವೆ. ಇಷ್ಟುಹೊತ್ತಿಗೆ ಈ ಕೆಲಸವು ಮುಗಿಯಬೇಕಾಗಿತ್ತು. 2–2 ಫೀಡರ್‌ಗಳಲ್ಲಿ 90% ಆಗಿದೆ. ಮಿಕ್ಕಿರುವುದು ಆಗಿರುವುದಿಲ್ಲ. ಯಾರೋ ಒಬ್ಬ A to Z Contractor, Gurgaon ಅಂಥಾ ಹಿಂದೆ ಕೊಟ್ಟು ಆತ ಕೆಲಸ ಮಾಡದೆ ಯಾರೋ private ನವರಿಗೆ ದುಡ್ಡು ಕೊಡದೆ ಅಲ್ಲಿ ಕೆಲಸ ಆಗಿರುವುದಿಲ್ಲ. ನಾವು ಅವರಿಗೆ ಕೊಟ್ಟಿರುವ ಟೆಂಡರ್‌ಅನ್ನು ಕ್ಯಾನ್ಸಲ್ ಮಾಡಿದ್ದೇವೆ. ಅವರನ್ನು ನಾವು black listಗೆ ಹಾಕಿದ್ದೇವೆ. ಈಗ ನಾವು ಪುನಃ ಹೊಸದಾಗಿ ಟೆಂಡರ್ ಕರೆದಿದ್ದೇವೆ. ಆದಷ್ಟು ಬೇಗನೆ complete ಮಾಡಿಕೊಡುತ್ತೇವೆ. ಏಕೆಂದರೆ, ನಿಮ್ಮ ತಾಲ್ಲೂಕು ಸಂಪೂರ್ಣವಾಗಿ ಸೇರಿದೆ. ಈ ಬಗ್ಗೆ ಹೆಚ್ಚುಕಡಿಮೆ 16 ಫೀಡರ್‌ನಲ್ಲಿಯೂ ಕೂಡ ನಾವು ಕೆಲಸ ಮುಗಿಸಬೇಕೆಂಬ ಕಾರ್ಯಕ್ರಮ ಇದೆ. ಈ ಟೆಂಡರ್ ಪ್ರಕ್ರಿಯೆ ಮುಗಿದ ತಕ್ಷಣ ನಾವು ಮಾಡಿಕೊಡುತ್ತೇವೆ.

**ಶ್ರೀ ನಾರಾಯಣಸ್ವಾಮಿ ಎಸ್.ಎನ್:–** ಆಯಿತು.

**ಅಧ್ಯಕ್ಷರು:–** ಮಾನ್ಯ ಸುನೀಲ್ ಕುಮಾರ್‌ರವರೆ, ತಮ್ಮ ಪ್ರಶ್ನೆ ಸಂಖ್ಯೆ:511 ಇದು ಬೇರೆ ಕಡೆಗೆ ವರ್ಗಾವಣೆಯಾಗಿದೆ.

**ಶ್ರೀ ವಿ. ಸುನೀಲ್ ಕುಮಾರ್:–** ಅವರು ಹಕ್ಕುಬಾಧ್ಯತಾ ಸಮಿತಿಯಲ್ಲಿ ದೋಷಾರೋಪಣೆಯನ್ನು ಮಾಡಿರುವುದು.

**ಅಧ್ಯಕ್ಷರು:–** ಆ ವಿಷಯ ಬೇಡ ಬಿಡಿ.

**ಶ್ರೀ ವಿ. ಸುನೀಲ್ ಕುಮಾರ್:–** ನೀವು ಆ ರೀತಿ ಹೇಳಿದರೆ ನಾನು ಆ ಪ್ರಶ್ನೆಯನ್ನು ಕೇಳುವುದಿಲ್ಲ ಬಿಡಿ. ಅವರು ಉತ್ತರ ಕೊಡುವುದಕ್ಕೂ ಅರ್ಹರಿಲ್ಲ. ನಾನು ಕೇಳುವುದೂ ಇಲ್ಲ ಬಿಡಿ.

**ಅಧ್ಯಕ್ಷರು:–** O.K. ತಾವು ಅದನ್ನು ಬಿಟ್ಟು ಬಿಡಿ. ಮಾನ್ಯ ಮೋಹಿಯುದ್ದಿನ್ ಬಾವಾ ಬಿ.ಎ.ರವರೆ ತಾವು ಪ್ರಶ್ನೆ ಸಂಖ್ಯೆ: 160 ಅನ್ನು ಕೇಳಿ.

## ಕೃಷಿ ಚಟುವಟಿಕೆ ಕುಂಟಿತ

**66(160); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)**

ಅ) ರಾಜ್ಯದಲ್ಲಿ ಇತ್ತೀಚೆಗೆ ಕೃಷಿ ಚಟುವಟಿಕೆ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರೈತರಿಗೆ ಸಮರ್ಪಕವಾಗಿ ಸಕಾಲದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಕೃಷಿ ಕಾರ್ಯವನ್ನು ಉತ್ತೇಜಿಸಲು ಸರ್ಕಾರವು ಯಾವ ಯೋಜನೆಗಳನ್ನು ಹಾಕಿಕೊಂಡಿದೆ; (ವಿವರ ನೀಡುವುದು)?

**ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು)**

ಅ) ರಾಜ್ಯದಲ್ಲಿ ಕೃಷಿ ಚಟುವಟಿಕೆಗೆ ಸಂಬಂಧಿಸಿದಂತೆ, 2010–11ರ ಅಂಕಿ ಅಂಶಗಳನ್ನು 2000–01 ಅಂಕಿ ಅಂಶಗಳೊಂದಿಗೆ ಹೋಲಿಸಿದಾಗ ಕೆಲವು ಜಿಲ್ಲೆಗಳಲ್ಲಿ ಸಾಗುವಳಿಯಾದ ನಿವ್ವಳ ವಿಸ್ತೀರ್ಣ ಕಡಿಮೆಯಾಗಿದೆ. ನೀರಾವರಿ ಸೌಲಭ್ಯ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಒಟ್ಟು ಸಾಗುವಳಿಯಾದ ವಿಸ್ತೀರ್ಣ ಹೆಚ್ಚಾಗಿರುತ್ತದೆ. ಆದರೆ ರಾಜ್ಯದಲ್ಲಿ 2010–11 ರಲ್ಲಿ ನಿವ್ವಳ ಮತ್ತು ಒಟ್ಟು ಸಾಗುವಳಿಯಾದ ವಿಸ್ತೀರ್ಣ 2000–2001 ಕ್ಕಿಂತ ಹೆಚ್ಚಾಗಿರುತ್ತದೆ (ಅನುಬಂಧ–1)